# ತಹಶೀಲ್ದಾರರು, ಬಳ್ಳಾರಿ. ಇವರ ನ್ಯಾಯಾಲಯದ ನಡವಳಿಗಳು

| ವಾದಿಗಳು | ಪ್ರತಿವಾದಿಗಳು |
| --- | --- |
| ಶ್ರೀ ಎ. ರಾಮ ಲಿಂಗನಗೌಡ ತಂದೆ ದಿ॥ ವೀರಭದ್ರಗೌಡ,<br>ಮದಿರೆ ಗ್ರಾಮ, ಬಳ್ಳಾರಿ ತಾ॥ | ಶ್ರೀ ಎಂ. ವಿಜಯ ಕುಮಾರ್ ಗೌಡ ತಂದೆ ಎಂ. ಬಸವನಗೌಡ,<br>ಮದಿರೆ ಗ್ರಾಮ, ಬಳ್ಳಾರಿ ತಾ॥ |

**ಪೀಠಿಕೆ :**

ಬಳ್ಳಾರಿ ತಾ॥ ಕೋಳೂರು ಹೋಬಳಿ ಮದಿರೆ ಗ್ರಾಮದ ಶ್ರೀ ಎಂ. ತಿಮ್ಮನಗೌಡ ತಂದೆ ಎಂ. ಬಸವನಗೌಡ, ಎಂಬುವವರು ಇವರ ಮಾಲಿಕತ್ವದಲ್ಲಿದ್ದ ಬಳ್ಳಾರಿ ತಾ॥ ಸೋಮಸಮುದ್ರ ಗ್ರಾಮದ ಸ.ನಂ.: 301ಬಿ/2 ವಿಸ್ತೀರ್ಣ: 8.50 ಎಕರೆ ಜಮೀನನ್ನು ಬಳ್ಳಾರಿ ತಾ॥ ಮದಿರೆ ಗ್ರಾಮದ ಶ್ರೀ ಎ. ರಾಮ ಲಿಂಗನಗೌಡ ತಂದೆ ದಿ॥ ವೀರಭದ್ರಗೌಡ, ಎಂಬುವವರಿಗೆ ದಸ್ತಾವೇಜು ಸಂಖ್ಯೆ: BLY-1-05009-2014-15 ದಿನಾಂಕ: 07–07–2014 ರಂತೆ ಕ್ರಯಕ್ಕೆ ನೀಡಿರುತ್ತಾರೆ. ಈ ಕ್ರಯದಂತೆ ಕ್ರಯದಾರರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡುವ ವಿಚಾರದಲ್ಲಿ ಶ್ರೀ ಎಂ. ವಿಜಯ ಕುಮಾರ್ ಗೌಡ ತಂದೆ ಎಂ. ಬಸವನಗೌಡ, ಮದಿರೆ ಗ್ರಾಮ, ಬಳ್ಳಾರಿ ತಾ॥ ಎಂಬುವವರು ತಕರಾರು ಸಲ್ಲಿಸಿದ ಪ್ರಯುಕ್ತ ಕಡತವನ್ನು ತಕರಾರು ವಿಚಾರಣೆಗಾಗಿ ಕೋಳೂರು ಹೋಬಳಿಯ ಕಂದಾಯ ನಿರೀಕ್ಷಕರು ಸಲ್ಲಿಸಿರುತ್ತಾರೆ.

ಈ ಬಗ್ಗೆ ದಿನಾಂಕ: 17–10–2016 ರಂದು ವಿಚಾರಣೆಗೆ ಹಾಜರಾಗಲು ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸ್ ನೀಡಿ ವಿಚಾರಣೆ ನಡೆಸಿದ್ದು, ಪ್ರತಿವಾದಿಗಳು ಗೈರು ಹಾಜರಾಗಿದ್ದು, ವಾದಿಗಳು ಕ್ರಯದಂತೆ ಹಕ್ಕು ಬದಲಾವಣೆ ಮಾಡಿಕೊಡುವಂತೆ ಕೋರಿದ್ದು, ತಕರಾರುದಾರರ ತಕರಾರನ್ನು ತಿರಸ್ಕರಿಸಿ ಕ್ರಯ ಪತ್ರ ನೊಂದಣಿ ಸಂಖ್ಯೆ: BLY-1-05009-2014-15 ದಿನಾಂಕ: 07–07–2014 ರಂತೆ ಕ್ರಯದಾರರ ಹೆಸರಿಗೆ ಹಕ್ಕು ಬದಲಾವಣೆ ಮಾಡಬೇಕಾಗಿರುವುದರಿಂದ ಈ ಕೆಳಗಿನಂತೆ,

***ಸಂ/ಕಂ/ಪಹಣಿ–2/ವಿವಾದ/13 /2015–16*** **ದಿನಾಂಕ: 17/10/16.**

## ಆದೇಶ

ಪೀಠಿಕೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾ॥ ಸೋಮಸಮುದ್ರ ಗ್ರಾಮದ ಸ.ನಂ.: 301ಬಿ/2 ವಿಸ್ತೀರ್ಣ: 8.50 ಎಕರೆ ಜಮೀನನ್ನು ದಸ್ತಾವೇಜು ಸಂಖ್ಯೆ: BLY-1-05009-2014-15 ದಿನಾಂಕ: 07–07–2014 ರಂತೆ ಕ್ರಯದಾರರಾದ ಶ್ರೀ ಎ. ರಾಮ ಲಿಂಗನಗೌಡ ತಂದೆ ದಿ॥ ವೀರಭದ್ರಗೌಡ, ಮದಿರೆ ಗ್ರಾಮ, ಬಳ್ಳಾರಿ ತಾ॥ ಇವರ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:....17.10.16.... ರಂದು ಈ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಲಾಯಿತು.

17.10.16

ತಹಶೀಲ್ದಾರರು,
ಬಳ್ಳಾರಿ.

ಗೆ,

1) ವಾದಿಗಳಿಗೆ.
2) ಗಣಕೀಕರಣ ಶಾಖೆ, ಭೂಮಿಕೇಂದ್ರ, ತಾಲ್ಲೂಕು ಕಛೇರಿ, ಬಳ್ಳಾರಿ.